# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 626 |
| ವಿಧಾನ ಪರಿಷತ್ತು ಸದಸ್ಯರು | ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 12.03.2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನಿಂದ 1986ನೇ ಸಾಲಿನಲ್ಲಿ ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ದಕ್ಷಿಣ ತಾಲ್ಲೂಕಿಗೆ (ಹಾಲಿ ಪೂರ್ವ ತಾಲ್ಲೂಕು) ಸ್ಥಳಾಂತರಗೊಂಡಿರುವ ಬಿದರಹಳ್ಳಿ ಹೋಬಳಿಯ ಕಂದಾಯ ಗ್ರಾಮಗಳು ಯಾವುವು; (ಸಂಪೂರ್ಣ ವಿವರ ನೀಡುವುದು) | ಬಿದರಹಳ್ಳಿ ಹೋಬಳಿಯ ಕಂದಾಯ ಗ್ರಾಮಗಳ ಪಟ್ಟಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |
| ಆ) | ಹಾಗಿದ್ದಲ್ಲಿ, ಸ್ಥಳಾಂತರಗೊಂಡಿರುವ ಕಂದಾಯ ಗ್ರಾಮಗಳ ದಾಖಲೆಗಳು ಸಮರ್ಪಕವಾಗಿ ವರ್ಗಾವಣೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಇ) | ಹಾಗಿದ್ದಲ್ಲಿ, ಸಮರ್ಪಕವಾಗಿ ದಾಖಲೆಗಳನ್ನು ವರ್ಗಾಯಿಸದಿರುವ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಸಮರ್ಪಕವಾಗಿ ದಾಖಲೆಗಳನ್ನು ವರ್ಗಾಯಿಸದಿರುವ ಅಧಿಕಾರಿಗಳ ವಿರುದ್ಧ ದೂರು ಅರ್ಜಿಗಳು ಸ್ವೀಕೃತವಾದಲ್ಲಿ, ಈ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ. |
| ಈ) | ಈಗಾಗಲೇ ಸ್ಥಳಾಂತರಗೊಂಡಿರುವ ಕಂದಾಯ ಗ್ರಾಮಗಳಲ್ಲಿ ಭೂಮಂಜೂರಾತಿಯಾಗಿ ಅನುಭವದಲ್ಲಿರುವ ರೈತರಿಗೆ ಪೋಡಿ ದುರಸ್ಥೀಕರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಸರ್ಕಾರಿ ಜಮೀನಿನಲ್ಲಿ ಮಂಜೂರಿಯಾದ ಎಲ್ಲ ಪ್ರಕರಣಗಳ ಪೋಡಿ ದುರಸ್ತಿ ಕುರಿತಂತೆ ಸರ್ಕಾರದ ದಿನಾಂಕ 25-11-2024ರನ್ವಯ ನಮೂನೆ 1 ರಿಂದ 5 ಮತ್ತು 6 ರಿಂದ 10 ಗಳ ಭರ್ತಿ ಮತ್ತು ದೃಡೀಕರಿಸುವ ಪ್ರಕ್ರಿಯೆಯನ್ನು ಸರಳೀಕರಿಸಿದೆ ಮತ್ತು ಸರ್ಕಾರಿ ಸರ್ವೇ ನಂಬರಿನ ಎಲ್ಲಾ ಮಂಜೂರಿದಾರರಿಗೆ ಏಕ ಕಾಲದಲ್ಲಿ ದುರಸ್ತಿ ಪಡಿಸುವಂತೆ ಸೂಚಿಸಿದೆ.<br><br>ನಮೂನೆ 1 ರಿಂದ 5 ಗಳ ಭರ್ತಿ, ಅನುಮೋದನೆ ಅದೇ ರೀತಿ ಅಳತೆ ಪ್ರಕರಣಗಳ ನಿರ್ವಹಣೆಯನ್ನು ಆನ್‌ಲೈನ್‌ನಲ್ಲಿ ನಿರ್ವಹಿಸುವ ಸಲುವಾಗಿ ಭೂಮಿ ಉಸ್ತುವಾರಿ ಕೋಶದಿಂದ ತಂತ್ರಾಂಶ ಅಭಿವೃದ್ಧಿ ಪಡಿಸಲಾಗಿದ್ದು, ಸದರಿ ತಂತ್ರಾಂಶದಲ್ಲಿ ರಾಜ್ಯದ ಎಲ್ಲಾ ಗ್ರಾಮಗಳ ಎಲ್ಲಾ ಮಂಜೂರಿ ಕಡತಗಳ ವಿವರವನ್ನು (ನಮೂನೆ 1 ರಿಂದ 5 ಗಳ) ದಾಖಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಯಾವುದೇ ಭೂಮಂಜೂರಿ ಕಡತದಲ್ಲಿ ಕನಿಷ್ಠ **i)**ಅಧಿಕೃತ ಜ್ಞಾಪನ/ದರಖಾಸ್ತು ವಹಿ/ಮಂಜೂರಿ ನಡವಳಿ ವಹಿ, **ii)** ಸಾಗುವಳಿ ಚೀಟಿ/ಸಾಗುವಳಿ ಚೀಟಿ ವಿತರಣಾ ವಹಿ, **iii)**ಚಾಲ್ತಿ ಪಹಣಿ, ದಾಖಲೆಗಳಿದ್ದಲ್ಲಿ ತಹಶೀಲ್ದಾರರು ಮಂಜೂರಿ ಕಾಲದ ಮ್ಯುಟೇಷನ್ ಹಾಗೂ ತತ್ಸಂಬಂದಿತ ದಾಖಲೆಗಳನ್ವಯ ಮಂಜೂರಿ ನೈಜತೆಯನ್ನು ಪರಿಶೀಲಿಸಿಕೊಂಡು ಪ್ರಕರಣಗಳನ್ನು ಅಳತೆಗೆ ಒದಗಿಸಲು ಮತ್ತು ತಹಶೀಲ್ದಾರರು ಮಂಜೂರಿ ನೈಜತೆಯಿಂದ ಕೂಡಿದೆ ಎಂದು ಅನುಬಂಧ-1 ರಂತೆ ಅಧಿಕೃತ ಜ್ಞಾಪನ ನೀಡಿದ ನಂತರ 30 ದಿನಗಳಲ್ಲಿ ಸರ್ವೆ ಅಧಿಕಾರಿಗಳು ಅರ್ಹ ಪ್ರಕರಣಗಳಲ್ಲಿ ಅಳತೆ ಪೋಡಿ ಕಾರ್ಯ ಕೈಗೊಳ್ಳಲು ಸೂಚಿಸಲಾಗಿದ್ದು, ಅದರಂತೆ, ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಒಂದು ತಾಲ್ಲೂಕಿನಿಂದ ಮತ್ತೊಂದು ತಾಲ್ಲೂಕಿಗೆ ಸ್ಥಳಾಂತರಗೊಂಡ ಕಂದಾಯ ಗ್ರಾಮಗಳಲ್ಲಿ ರೈತರಿಗೆ ಭೂಮಂಜೂರಾತಿ ಆಗಿದ್ದ ಪಕ್ಷದಲ್ಲಿ ಸದರಿ ಮಂಜೂರಾತಿ ಕಡತಗಳನ್ನು ಸಹ ಹಸ್ತಾಂತರ ಮಾಡಲಾಗಿರುತ್ತದೆ. ಕೆಲವು ಸಂದರ್ಭಗಳಲ್ಲಿ ಮಂಜೂರಾತಿ ವಹಿಗಳು ಮೂಲ ತಾಲ್ಲೂಕಿನಲ್ಲಿ ಉಳಿದಿರುತ್ತವೆ. ಅಂತಹ ದಾಖಲೆಗಳನ್ನು ಮೂಲ ತಾಲ್ಲೂಕಿನ ತಹಶೀಲ್ದಾರವರೊಂದಿಗೆ ಮಂಜೂರಾತಿ ನೈಜತೆಯನ್ನು ಪರಿಶೀಲಿಸಿಕೊಂಡು ಪೋಡಿ ದುರಸ್ತಿ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ. |
| ಉ) | ಬಿದರಹಳ್ಳಿ ಹೋಬಳಿಯ ಎಷ್ಟು ಗ್ರಾಮಗಳು ದುರಸ್ತಿ (ಪೋಡಿ) ಮುಕ್ತ ಗ್ರಾಮಗಳಾಗಿವೆ? (ಗ್ರಾಮವಾರಿ, ಸರ್ವೇ ನಂಬರ್ ವಾರು, ವಿಸ್ತೀರ್ಣವಾರು, ಹೆಸರುಗಳ ಸಂಪೂರ್ಣ ಮಾಹಿತಿ ನೀಡುವುದು) | ಪೋಡಿ ಮುಕ್ತಗ್ರಾಮ ಯೋಜನೆಯನ್ನು ಸರ್ಕಾರದ ದಿನಾಂಕ:9-9-2015ರನ್ವಯ ಚಾಲನೆಗೆ ಬಂದಿರುತ್ತದೆ. ಸದರಿ ಸಮಯದಲ್ಲಿ ಬೆಂಗಳೂರು ನಗರ ಜಿಲ್ಲೆ ಹೊರತು ಪಡಿಸಿ ರಾಜ್ಯ ವ್ಯಾಪ್ತಿಯಲ್ಲಿ ಉಳಿದೆಲ್ಲ ಜಿಲ್ಲೆಗಳಲ್ಲಿಯೂ ಈ ಯೋಜನೆ ಹಮ್ಮಿಕೊಂಡಿದ್ದು, ಈವರೆಗೂ ರಾಜ್ಯದಲ್ಲಿ 16630 ಗ್ರಾಮಗಳು ಒಟ್ಟು 2090920 ಬ್ಲಾಕ್ ಗಳು ಇಂದೀಕರಣವಾಗಿದೆ. ಆದರೆ ಬೆಂಗಳೂರು ನಗರ ಜಿಲ್ಲೆಯಲ್ಲಿ ಈವರೆಗೂ ಪೋಡಿಮುಕ್ತ ಯೋಜನೆಯನ್ನು ಚಾಲನೆಗೊಳಿಸಿರುವುದಿಲ್ಲ.<br><br>ಆದ್ದರಿಂದ ಬಿದರಹಳ್ಳಿ ಹೋಬಳಿಯು ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಗೆ ಬರುವುದರಿಂದ, ಈವರೆಗೂ ಈ ಯೋಜನೆಯಡಿಯಲ್ಲಿ ಯಾವುದೇ ಗ್ರಾಮ /ಸರ್ವೆ ನಂಬರ್ ಪೋಡಿಮುಕ್ತ ಯೋಜನೆಯಡಿಯಲ್ಲಿ ಒಳಪಟ್ಟಿರುವುದಿಲ್ಲ. |

**ಸಂಖ್ಯೆ: ಕಂಇ 43 ಎಸ್ಎಸ್‌ಸಿ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು